ಕರ್ನಾಟಕ ಲೋಕಾಯುಕ್ತ

DRE-2

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2109\2013\ಉವಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 14/08/2017

<u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ</u>

<u>ವಿಷಯ:</u> ಸರ್ಕಾರಿ ನೌಕರರಾದ ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕ್ ನಗರಸಭೆಯ 1) ಪರಿಸರ ಅಭಿಯಂತರರಾಗಿದ್ದ ಶ್ರೀ.ಬಿ.ಎಸ್.ಯೋಗೀಶ್, ಪೌರಾಯುಕ್ತರುಗಳಾಗಿದ್ದ 2) ಡಾ॥ವೆಂಕಟೇಶಯ್ಯ, 3)ಶ್ರೀ.ಟಿ.ಎಸ್.ರಾಮಶೇಷ (ಪ್ರಭಾರ) ಮತ್ತು 4) ಶ್ರೀ.ಚಂದ್ರಶೇಖರಯ್ಯ, 5)ಸಹಾಯಕ ಕಾರ್ಯ-ಪಾಲಕ ಅಭಿಯಂತರರಾದ ಶ್ರೀ.ಕೆ.ಎಸ್.ವೆಂಕಟ್‌ರಾಮ್, 6) ಸಹಾಯಕ ಅಭಿಯಂತರರಾದ ಶ್ರೀ.ಹೆಚ್.ಎಸ್.ನಿರಂಜನಮೂರ್ತಿ, ಕಿರಿಯ ಅಭಿಯಂತರರುಗಳಾದ 7)ಶ್ರೀ.ಡಿ.ಬಸವರಾಜ, 8) ಶ್ರೀ.ಬಿ.ಪಿ.ಸುರೇಶ್‌ಕುಮಾರ್, 9) ಶ್ರೀ.ಚೆನ್ನಕೇಶವ, 10)ಶ್ರೀಮತಿ.ಆರ್.ವಿಶಾಲಾಕ್ಷಿ, 11) ಲೆಕ್ಕಾಧೀಕ್ಷಕರಾದ ಶ್ರೀ.ಎಸ್.ಡಿ.ಬಸವೇ ಗೌಡ, 12) ಅಕೌಂಟೆಂಟ್ ಶ್ರೀಮತಿ.ಜಿ.ಎಲ್.ಆಶಾರಾಣಿ ಮತ್ತು 13)ಲೆಕ್ಕಾಧೀಕ್ಷಕರಾದ ಶ್ರೀ.ಎ.ಪಿ.ಮಧುಸೂದನ ರವರುಗಳು ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

**********

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕ ನಗರಸಭೆಯ ಮಾಜಿ ಅಧ್ಯಕ್ಷರಾದ ಶ್ರೀ.ಎಂ.ನಾಗರಾಜ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕ್ ನಗರಸಭೆಯ ಪರಿಸರ ಅಭಿಯಂತರರಾಗಿದ್ದ ಶ್ರೀ.ಬಿ.ಎಸ್.ಯೋಗೀಶ್, [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ತಿಪಟೂರು ನಗರಸಭೆಯ 2009-10ನೇ ಸಾಲಿನ ಘನತ್ಯಾಜ್ಯ ವಸ್ತು ವಿಲೇವಾರಿ ನಿರ್ವಹಣೆಗೆ ಟೆಂಡರ್ ಕರೆದಿದ್ದು, ಕಾರ್ಯಾದೇಶ ನೀಡಿದ್ದರೂ ಸಹ 6 ತಿಂಗಳಿನಿಂದ 1 ವರ್ಷದೊಳಗೆ ಮುಕ್ತಾಯವಾಗ ಬೇಕಾಗಿದೆ. ಆದರೆ, ಸದರಿ ಕಾಮಗಾರಿ ಇಂದಿಗೂ ಸಹ ಪ್ರಗತಿಯಲ್ಲಿದೆ ಹಾಗೂ ಸದರಿ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ

Sd/-

ಕೂಡಿದೆ. ಎದುರುದಾರರು ಸದರಿ ಕಾಮಗಾರಿಯಿಂದ ಕೋಟ್ಯಾಂತರ ರೂಪಾಯಿ ದುರುಪಯೋಗ ಪಡಿಸಿಕೊಂಡಿರುವುದಾಗಿ ದೂರುದಾರರು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಘನತ್ಯಾಜ್ಯ ನಿರ್ವಹಣೆಯ ಪರಿಸರಕ್ಕೆ ಸಂಬಂಧಿಸಿದ ಕೆಲಸಗಳನ್ನು ಮಾತ್ರ ನಿರ್ವಹಿಸುತ್ತಿದ್ದು, ಸಿವಿಲ್ ಕಾಮಗಾರಿಗಳು ತಮ್ಮ ವ್ಯಾಪ್ತಿಗೆ ಬರುವುದಿಲ್ಲ. ಅವುಗಳನ್ನು ತಾಂತ್ರಿಕ ಶಾಖೆಯಿಂದ ನಿರ್ವಹಿಸುತ್ತಾರೆ. ತುಮಕೂರು ಜಿಲ್ಲಾಧಿಕಾರಿಗಳು ಸದರಿ ಕಾಮಗಾರಿಗಳ ಬಗ್ಗೆ ಬುಕ್‌ಲೆಟ್ ತಯಾರಿಸಲು ಸೂಚಿಸಿದ್ದು, ಈ ಬಗ್ಗೆ ಬುಕ್‌ಲೆಟ್ ತಯಾರಿಸಿ ಕೊಟ್ಟಿದೆ. ಸದರಿ ಕಾಮಗಾರಿಗಳು ಮುಗಿದ ನಂತರ ತಾಂತ್ರಿಕ ಶಾಖೆಯವರು ಆರೋಗ್ಯ ಶಾಖೆಗೆ ಹಸ್ತಾಂತರ ಮಾಡಿದಾಗ ನಿರ್ವಹಣೆ ಮಾಡಲಾಗುವುದೆಂದು ಹೇಳಿದ್ದಾರೆ.

4. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ತುಮಕೂರು ಜಿಲ್ಲಾಧಿಕಾರಿಗಳನ್ನು ಕೇಳಲಾಗಿ, ತುಮಕೂರು ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರನ್ನು ಕೇಳಲಾಗಿ, ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ –

ದೂರುದಾರರು ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದಂತಹ ಪ್ರದೇಶವಾದ ತಿಪಟೂರು ನಗರಸಭೆಯ ಘನ ತ್ಯಾಜ್ಯ ವಸ್ತು ವಿಲೇವಾರಿ ಘಟಕಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ, ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬವಾಗಿರುವ ಬಗ್ಗೆ Standard Tender Documents for Procurement of worksರ ನಿಯಮ 36ರಂತೆ ಅಗತ್ಯ ಕ್ರಮಗಳನ್ನು ಅನುಸರಿಸದೇ ಇದ್ದು, ಅದರಿಂದಾಗಿ ನಗರಸಭೆಗೆ ₹9,88,450/–ಗಳ ಆರ್ಥಿಕ ನಷ್ಟ ಉಂಟಾಗಿದ್ದು, ಅದಕ್ಕೆ ಎದುರುದಾರರು, ಪ್ರಭಾರ ಪೌರಾಯುಕ್ತರುಗಳಾಗಿದ್ದ 1) ಶ್ರೀ.ಕೆ.ಎಂ.ಚೌದರಿ, 2) ಡಾ॥ವೆಂಕಟೇಶಯ್ಯ, 3) ಶ್ರೀ.ಟಿ.ಎಸ್.ರಾಮಶೇಷ (ಪ್ರಭಾರ) ಮತ್ತು 4) ಶ್ರೀ.ಚಂದ್ರಶೇಖರಯ್ಯ, ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ 5)ಶ್ರೀ.ಕೆ.ಎಸ್.ವೆಂಕಟ್‌ರಾಮ್, 6) ಸಹಾಯಕ ಅಭಿಯಂತರರಾಗಿದ್ದ ಶ್ರೀ.ಹೆಚ್.ಎಸ್.ನಿರಂಜನಮೂರ್ತಿ, ಕಿರಿಯ ಅಭಿಯಂತರರುಗಳಾಗಿದ್ದ 7)ಶ್ರೀ.ಡಿ.ಬಸವರಾಜ, 8) ಶ್ರೀ.ಬಿ.ಪಿ.ಸುರೇಶ್‌ಕುಮಾರ್, 9) ಶ್ರೀ.ಚೆನ್ನಕೇಶವ ಮತ್ತು 10)ಶ್ರೀಮತಿ.ಆರ್.ವಿಶಾಲಾಕ್ಷಿ, 11)ಲೆಕ್ಕಾಧೀಕ್ಷಕರುರಾಗಿದ್ದ ಶ್ರೀ.ಬಸವೇಗೌಡ, 12) ಅಕೌಂಟೆಂಟ್ ಶ್ರೀಮತಿ.ಜಿ.ಎಲ್.ಆಶಾರಾಣಿ, 13) ಲೆಕ್ಕಾಧೀಕ್ಷಕರಾಗಿದ್ದ ಶ್ರೀ.ಎ.ಪಿ.ಮಧುಸೂದನ್ ಮತ್ತು 14) ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ ಶ್ರೀ.ಟಿ.ಎಸ್.ರಾಮಶೇಷ ರವರುಗಳು ಜವಾಬ್ದಾರರಾಗಿರುವುದಾಗಿ ಹೇಳಿದ್ದಾರೆ.

Sd/-

COMPH/UPLOK/BD-2109/2013/DRE-2

5. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಹೇಳಿರುವ ಅಧಿಕಾರಿ\ ಸಿಬ್ಬಂಧಿಗಳಾದ ಪ್ರಭಾರ ಪೌರಾಯುಕ್ತರುಗಳಾಗಿದ್ದ 1) ಶ್ರೀ.ಕೆ.ಎಂ.ಚೌದರಿ, 2) ಡಾ||ವೆಂಕಟೇಶಯ್ಯ, 3) ಶ್ರೀ.ಟಿ.ಎಸ್.ರಾಮಶೇಷ (ಪ್ರಭಾರ) ಮತ್ತು 4) ಶ್ರೀ.ಚಂದ್ರಶೇಖರಯ್ಯ, ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ 5)ಶ್ರೀ.ಕೆ.ಎಸ್.ವೆಂಕಟರಾಮ್, 6) ಸಹಾಯಕ ಅಭಿಯಂತರರಾಗಿದ್ದ ಶ್ರೀ.ಹೆಚ್.ಎಸ್.ನಿರಂಜನಮೂರ್ತಿ, ಕಿರಿಯ ಅಭಿಯಂತರರುಗಳಾಗಿದ್ದ 7)ಶ್ರೀ.ಡಿ.ಬಸವರಾಜ್, 8) ಶ್ರೀ.ಬಿ.ಪಿ.ಸುರೇಶ್‌ಕುಮಾರ್, 9)ಶ್ರೀ.ಚೆನ್ನಕೇಶವ ಮತ್ತು 10)ಶ್ರೀಮತಿ.ಆರ್.ವಿಶಾಲಾಕ್ಷಿ, 11)ಲೆಕ್ಕಾಧೀಕ್ಷಕರುರಾಗಿದ್ದ ಶ್ರೀ.ಬಸವೇಗೌಡ, 12) ಅಕೌಂಟೆಂಟ್ ಶ್ರೀಮತಿ.ಜಿ.ಎಲ್.ಆಶಾರಾಣಿ, 13) ಲೆಕ್ಕಾಧೀಕ್ಷಕರಾಗಿದ್ದ ಶ್ರೀ.ಎ.ಪಿ.ಮಧುಸೂದನ್ ಮತ್ತು 14) ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ ಶ್ರೀ.ಟಿ.ಎಸ್.ರಾಮಶೇಷ ರವರುಗಳನ್ನು 2 ರಿಂದ 15ನೇ ಎದುರುದಾರರೆಂದು ಮುಖಪುಟದಲ್ಲಿ ಸೇರಿಸಿ, ಸದರಿ 1 ರಿಂದ 15ನೇ ಎದುರುದಾರರುಗಳಿಂದ ತನಿಖಾ ವರದಿಗೆ ಆಕ್ಷೇಪಣೆಯನ್ನು ಕೇಳಲಾಯಿತು.

6. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಸದರಿ ನಗರಸಭೆಯಲ್ಲಿ ಕಡಿಮೆ ಅವಧಿಗೆ ಕೆಲಸ ನಿರ್ವಹಿಸಿದ್ದು, ತಮ್ಮದು ಯಾವುದೇ ಕರ್ತವ್ಯ ಲೋಪ ಇಲ್ಲವೆಂದು ಹೇಳಿದ್ದಾರೆ.

7. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ, ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಕಾಮಗಾರಿ ವಿಳಂಬಕ್ಕೆ ಸಂಬಂಧಪಟ್ಟಂತೆ ದಂಡ ವಿಧಿಸುವಂತೆ ತೀರ್ಮಾನಿಸಿರುವುದು ಕಾನೂನುಬಾಹಿರವಾಗಿದೆ. ಸದರಿ ವರದಿಯನ್ನು ಟೆಂಡರ್ ಪ್ರಕ್ರಿಯೆ ನಿಯಮಾವಳಿಗೆ ವಿರುದ್ಧವಾಗಿದೆ. ಸದರಿ ಕಾಮಗಾರಿಗಳು ಇನ್ನೂ ಸಹ ಪ್ರಗತಿಯಲ್ಲಿದ್ದು, ಗುತ್ತಿಗೆದಾರರಿಂದ ಪಡೆದ ಇಎಂಡಿ ಮತ್ತು ಎಫ್‌ಎಸ್‌ಡಿ ಹಣ ಬಾಕಿ ಇದ್ದು, ವಿಳಂಬಕ್ಕೆ ಸದರಿ ಮೊತ್ತವನ್ನು ಕಟಾವು ಮಾಡಬಹುದು ಮತ್ತು ಸಭೆಯ ತೀರ್ಮಾನದಂತೆ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಅವಕಾಶವಿದೆಯೆಂದು ಹೇಳಿದ್ದಾರೆ.

Sd/-

8. ನಾಲ್ಕು (4) ಮತ್ತು 15ನೇ ಎದುರುದಾರರು ಒಬ್ಬರೇ ಆಗಿದ್ದು, ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಕಾಮಗಾರಿಗಳಿಗೆ ಉಂಟಾಗಿರುವ ವಿಳಂಬಕ್ಕೆ ಸಂಬಂಧಪಟ್ಟಂತೆ, ತುಮಕೂರು ಜಿಲ್ಲಾಧಿಕಾರಿಗಳು ದಂಡ ವಿಧಿಸಿದ್ದು, ಅದನ್ನು ಗುತ್ತಿಗೆದಾರರ ಇಎಂಡಿ ಮತ್ತು ಎಫ್‌ಎಸ್‌ಡಿ ಹಣದಿಂದ ವಸೂಲಿ ಮಾಡಬಹುದಾಗಿದೆಯೆಂದು ಹೇಳಿದ್ದಾರೆ.

9. ಐದು (5), 11 ರಿಂದ 14ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ –

ಸದರಿ ಕಾಮಗಾರಿಗಳಿಗೆ ಉಂಟಾಗಿರುವ ವಿಳಂಬಕ್ಕೆ ಸಂಬಂಧಪಟ್ಟಂತೆ, ತುಮಕೂರು ಜಿಲ್ಲಾಧಿಕಾರಿಗಳು ದಂಡ ವಿಧಿಸಿದ್ದು, ಅದನ್ನು ಗುತ್ತಿಗೆದಾರರ ಇಎಂಡಿ ಮತ್ತು ಎಫ್‌ಎಸ್‌ಡಿ ಹಣದಿಂದ ವಸೂಲಿ ಮಾಡಬಹುದಾಗಿದೆಯೆಂದು ಹೇಳಿದ್ದಾರೆ.

10. ಆರನೇ (6ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಕಾಮಗಾರಿಗಳಿಗೆ ಉಂಟಾಗಿರುವ ವಿಳಂಬಕ್ಕೆ ಸಂಬಂಧಪಟ್ಟಂತೆ, ತುಮಕೂರು ಜಿಲ್ಲಾಧಿಕಾರಿಗಳು ₹1,32,433/–ನ್ನು ದಂಡ ವಿಧಿಸಿದ್ದು, ಸದರಿ ಹಣದ ಬಗ್ಗೆ ಈಗಾಗಲೇ ನಗರಸಭೆ ಪೌರಾಯುಕ್ತರಿಗೆ ವರದಿ ಸಲ್ಲಿಸಿದ್ದು, ಯಾವುದೇ ಮಾಹಿತಿ ಬಂದಿಲ್ಲವೆಂದು ಹೇಳಿದ್ದಾರೆ.

11. ಏಳು (7) ಮತ್ತು 8ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಕಾಮಗಾರಿಗಳಿಗೆ ಉಂಟಾಗಿರುವ ವಿಳಂಬಕ್ಕೆ ಸಂಬಂಧಪಟ್ಟಂತೆ, ತುಮಕೂರು ಜಿಲ್ಲಾಧಿಕಾರಿಗಳು ದಂಡ ವಿಧಿಸಿದ್ದು, ಸದರಿ ದಂಡಕ್ಕೆ ಗುತ್ತಿಗೆದಾರರೇ ಕಾರಣಕರ್ತರಾಗಿರುವುದಾಗಿ ಹೇಳಿದ್ದಾರೆ.

12. ಒಂಬತ್ತನೇ (9ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ, ತಾವು ಬಿಲ್ಲನ್ನು ಪರಿಶೀಲನೆ ಮಾಡಿಕೊಟ್ಟಿರುವುದಾಗಿ ಹೇಳಿದ್ದಾರೆ.

Sd/-

COMPT/UPLOK/BD-2109/2013/DRE-2

13. ಹತ್ತನೇ (10ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ, ತಾವು ಬಿಲ್ಲನ್ನು ಪರಿಶೀಲನೆ ಮಾಡಿಕೊಟ್ಟಿದ್ದು, ಈ ಬಗ್ಗೆ ಪರಿಸರ ಮತ್ತು ತಾಂತ್ರಿಕ ವಿಭಾಗದವರು ಉಸ್ತುವಾರಿ ನೋಡಿಕೊಂಡಿರುವುದಾಗಿ ಹೇಳಿದ್ದಾರೆ.

14. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ತಿಪಟೂರು ನಗರಸಭಾ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಂಬಂಧಪಟ್ಟಂತೆ, ನಿರ್ವಹಿಸಲಾದ ಕಾಮಗಾರಿಗಳು ನಿಗದಿತ ಕಾಲಾವಧಿಯಲ್ಲಿ ಮುಕ್ತಾಯಗೊಳಿಸಿಲ್ಲ. ಸದರಿ ಕಾಮಗಾರಿಗಳು ಕಳಪೆ ಕಾಮಗಾರಿಗಳಾಗಿದ್ದು, ಸದರಿ ಕಾಮಗಾರಿಗಳ ನಿರ್ವಹಣೆ ಸಂದರ್ಭದಲ್ಲಿ 6 ತಿಂಗಳಿನಿಂದ 1 ವರ್ಷದೊಳಗೆ ಕಾಮಗಾರಿ ನಿರ್ವಹಣೆ ಮಾಡಬೇಕೆಂಬ ಷರತ್ತಿಗೊಳಪಟ್ಟು ಕಾರ್ಯಾದೇಶವನ್ನು ಜಾರಿಗೊಳಿಸಿದ್ದು, ಆದರೆ ಎದುರುದಾರರು ಸದರಿ ಕಾಮಗಾರಿಗಳನ್ನು ನಿಗಧಿತ ಸಮಯದೊಳಗೆ ನಿರ್ವಹಣೆ ಮಾಡದೇ ಇರುವುದು ಕಂಡು ಬಂದಿದೆ ಹಾಗೂ ನಿರ್ವಹಿಸಲಾದ ಕಾಮಗಾರಿಗಳು ಸಹ ಕಳಪೆ ಕಾಮಗಾರಿಗಳಾಗಿವೆ. ಎದುರುದಾರರು ಸದರಿ ಕಾಮಗಾರಿಗಳನ್ನು ನಿರ್ವಹಣೆ ಮಾಡುವ ಸಂದರ್ಭದಲ್ಲಿ Standard Tender Documents for Procurement of worksರ ನಿಯಮ 36ರಂತೆ ದಂಡ ವಿಧಿಸಿ ಗುತ್ತಿಗೆದಾರರ ಬಿಲ್ಲಿನಲ್ಲಿ ದಂಡದ ಮೊತ್ತವನ್ನು ಕಟಾವು ಮಾಡಬೇಕಾಗಿದ್ದು, ಆದರೆ ಎದುರುದಾರರು ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಉಂಟಾಗುತ್ತಿರುವ ವಿಳಂಬದ ಬಗ್ಗೆ ಗುತ್ತಿಗೆದಾರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೇ ಸರ್ಕಾರಕ್ಕೆ ನಷ್ಟ ಪಡಿಸಿದ್ದಾರೆ. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳ ಕಛೇರಿಯ ಯೋಜನಾ ನಿರ್ದೇಶಕರು ಮತ್ತು ತಾಂತ್ರಿಕ ಸಿಬ್ಬಂಧಿರವರ ವರದಿಯನ್ವಯ ತಿಪಟೂರು ನಗರಸಭೆ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕಕ್ಕೆ ಸಂಬಂಧಪಟ್ಟಂತೆ, ಎದುರುದಾರರು ಒಟ್ಟಾರೆಯಾಗಿ ₹9,88,450/–ನ್ನು ನಗರಸಭೆಗೆ ಆರ್ಥಿಕ ನಷ್ಟ ಪಡಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಅಲ್ಲದೇ, ಸದರಿ ಕಾಮಗಾರಿಗಳ ನಿರ್ವಹಣೆ ಸಂದರ್ಭದಲ್ಲಿ ಅನಾವಶ್ಯಕವಾಗಿ ವಿಳಂಬ ಮಾಡಿದ ಗುತ್ತಿಗೆದಾರರಿಗೆ Standard Tender Documents for Procurement of worksರ ನಿಯಮ 36ರಂತೆ ದಂಡ ವಿಧಿಸಿ ಗುತ್ತಿಗೆದಾರರ ಬಿಲ್ಲಿನಲ್ಲಿ ದಂಡದ ಮೊತ್ತವನ್ನು ಕಟಾವು ಮಾಡದೇ ಸಂಪೂರ್ಣ ಬಿಲ್ಲನ್ನು ಬಿಡುಗಡೆ ಮಾಡಿ, ಸದರಿ ಕಾಮಗಾರಿಗಳನ್ನು ಕಳಪೆ ಕಾಮಗಾರಿಗಳಾಗಿ ನಿರ್ವಹಣೆ ಮಾಡಲು ಅವಕಾಶ ಮಾಡಿರುವುದು ಕಂಡು ಬಂದಿದೆ.

15. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ತನಿಖಾಧಿಕಾರಿಗಳ ವರದಿ ಮತ್ತು ಎದುರುದಾರರು ನೀಡಿರುವ ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು

Sd/-

ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

16. ಎರಡನೇ (2ನೇ) ಎದುರುದಾರರು ನಿವೃತ್ತಿಯಾಗಿ 5 ವರ್ಷಗಳು ಮೇಲ್ಪಟ್ಟಿರುವುರಿಂದ ಹಾಗೂ 4 ಮತ್ತು 15ನೇ ಎದುರುದಾರರು ಒಬ್ಬರೇ ಆಗಿದ್ದು, ಪ್ರಭಾರ ಆಯುಕ್ತರಾಗಿ ಹಾಗೂ ಸಹಾಯಕ ಅಭಿಯಂತರರಾಗಿ ಬೇರೆ ಬೇರೆ ಕಾಲಾವಧಿಯಲ್ಲಿ ಕಾರ್ಯನಿರ್ವಹಿಸಿರುವುದರಿಂದ, ಸದರಿ 2 ಮತ್ತು 15ನೇ ಎದುರುದಾರರುಗಳ ವಿರುದ್ಧದ ನಡವಳಿಗಳನ್ನು ಕೈಬಿಡಲಾಗಿದೆ.

17. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ಹಾಗೂ 3 ರಿಂದ 14ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

18. ಅದಲ್ಲದೆ 1 ಹಾಗೂ 3 ರಿಂದ 14ನೇ ಎದುರದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 6 ಮತ್ತು 12ನೇ ಎದುರುದಾರರು ಕ್ರಮವಾಗಿ, ದಿನಾಂಕ:31/10/2013 ಮತ್ತು 30/06/2017 ರಂದು ನಿವೃತ್ತಿ ಹೊಂದಿರುವುದರಿಂದ ಕೆಸಿಎಸ್‌ಆರ್ ನಿಯಮ 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ 1 ಮತ್ತು 3 ರಿಂದ 14ನೇ ಎದುರದಾರರುಗಳ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

Sd/-

COMPH/UPL/014 BD-2109/2013/DRE-2

19. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 6 ಮತ್ತು 12ನೇ ಎದುರುದಾರರು ಕ್ರಮವಾಗಿ, ದಿನಾಂಕ:31/10/2013 ಮತ್ತು 30/06/2017 ರಂದು ನಿವೃತ್ತಿ ಹೊಂದಿದ್ದಾರೆ.

14/8/17.
(ನ್ಯಾಯಮೂರ್ತಿ ಸುಭಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.